# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ಸೆಪ್ಟೆಂಬರ್– 2018

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ–1

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

ದಿನಾಂಕ: 26.09.2018    ಗರಿಷ್ಟ ಅಂಕಗಳು–100    ಸಮಯ: ಬೆಳಗ್ಗೆ 9.30 ರಿಂದ 11.30 ರವರೆಗೆ

---

**I. ಕೆಳಗಿನವುಗಳನ್ನು ಯಾರು ಯಾರಿಗೆ ಯಾವ ಸಂದರ್ಭದಲ್ಲಿ ಹೇಳಿದರು ಎಂಬುದನ್ನು ವಿವರಿಸಿ:– (ಯಾವುದಾದರೂ ಐದಕ್ಕೆ)** 20

1) "ಮಗು ಇದು ಚೆನ್ನಾಗಿದೆ, ಒಂದು ಕತ್ತರಿಯನ್ನು ಎಲ್ಲಿಯಾದರೂ ಸಂಪಾದಿಸಿಕೊಂಡು ಬಾ"
2) "ಸ್ವಾಮಿ ! ತುಂಬಾ ಅಡಚಣೆಯಾಯಿತು ಈಗ ನನ್ನಲ್ಲಿ ಹಣವಿಲ್ಲ"
3) "ಎಲ್ಲಕಿಂತ ಅಮೂಲ್ಯವಾದ ನಿಧಿಯನ್ನು ಲೂಟಿ ಮಾಡಿ ತಂದಿದ್ದೇನೆ."
4) "ಈ ದಿನ ಮದ್ಯಾಹ್ನ ನಮ್ಮ ತಂದೆ ಒಂದು ಮಗುವನ್ನು ಹೆತ್ತರು"
5) "ಕೆಲವು ಜನರು ಕಿವಿಯಿಂದ ಒಂದು ವಿಷಯವನ್ನು ಕೇಳಿದರೆ ಅದನ್ನು ಮತ್ತೊಂದು ಕಿವಿಯಿಂದ ಬಿಡುತ್ತಾರೆ"
6) "ನಾನು ಹೇಳಿದ್ದು ಕಲ್ಯಾಣ ನಗರವನ್ನು ಗೆದ್ದು ತಾ ಎಂದು ಕಂಡವರ ಹೆಂಡತಿಯನ್ನು ಅಪಹರಿಸಿ ತಾ ಎಂದಲ್ಲ".
7) "ಮಗಳೇ ನಮಗೆ ಎತ್ತಿನ ಹಾಲು ತಲುಪಿತು ಎಂದು ನಿಮ್ಮ ತಂದೆಗೆ ತಿಳಿಸು"

**II. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡಕ್ಕೆ ಒಂದು ಪುಟ ಮೀರದಂತೆ ವಿವರಿಸಿರಿ:–** 20

1) ಕಷ್ಟಪಟ್ಟು ದುಡಿಯುವ ಗುಣ ಮತ್ತು ಪ್ರಾಮಾಣಿಕತೆ ಇದ್ದರೆ ಖಂಡಿತವಾಗಿ ಫಲ ಸಿಕ್ಕೇ ಸಿಗುತ್ತದೆ.
2) ಕಂಡೂ ಮಾಡುವ ಪಾಪಕ್ಕಿಂತ ಕಾಣದೇ ಮಾಡುವ ಪುಣ್ಯ ಮೇಲು.
3) ಬಾಜಿ ಸೋನೆದೇವನಿಗೆ ಶಿವಾಜಿ ಕಲಿಸಿದ ಪಾಠ

**III. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ಸಮಾನಾರ್ಥಕ ಪದ ಬರೆಯಿರಿ.** 05

1) ಧನಿಕ
2) ಸಮ್ಮತಿ
3) ಸಮೀಪ
4) ಹೆದರಿಕೆ
5) ಸಂಗಡ
6) ಸಾಯಂಕಾಲ
7) ದಯೆ

**IV. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ವಿರುದ್ಧ ಪದ ಬರೆಯಿರಿ.** 05

1) ಪ್ರಾಮಾಣಿಕ
2) ಶ್ರೀಮಂತ
3) ರಾತ್ರಿ
4) ಗೌರವ
5) ಬುದ್ಧಿವಂತ
6) ಆರೋಗ್ಯ
7) ಮೃದು

**V. ಈ ಕೆಳಗಿನ ಅಂಕಿಗಳನ್ನು ಅಕ್ಷರಗಳಲ್ಲಿ ಬರೆಯಿರಿ:– (ಐದಕ್ಕೆ ಮಾತ್ರ)** 05

1) 2,53,100
2) 5,005
3) 7,55,015
4) 65,008
5) 33,848
6) 7,87,617
7) 80,898

www.shikarat.com

**VI. ಈ ಕೆಳಗಿನವುಗಳನ್ನು ಅಂಕಿಗಳಲ್ಲಿ ಬರೆಯಿರಿ:- (ಐದಕ್ಕೆ ಮಾತ್ರ)** ೦೫

1) ಎಂಟು ಲಕ್ಷದ ಆರು ಸಾವಿರದ ಎಂಟುನೂರೈವತ್ತು
2) ಎರಡು ಲಕ್ಷದ ತೊಂಬತ್ತು ಸಾವಿರದ ಐದು.
3) ಐವತ್ತೈದು ಸಾವಿರದ ಆರುನೂರ ಎಂಬತ್ತೆಂಟು.
4) ನಾಲ್ಕು ಲಕ್ಷದ ಹದಿನೈದು ಸಾವಿರದ ಎಂಟು ನೂರು.
5) ಇಪ್ಪತ್ತೊಂದು ಸಾವಿರದ ಐನ್ನೂರ ನಲವತ್ತೆಂಟು
6) ಹತ್ತು ಸಾವಿರದ ಎಂಟುನೂರ ಐದು.
7) ಇಪ್ಪತ್ಮೂರು ಲಕ್ಷದ ನಲವತ್ತೆಂಟು ಸಾವಿರದ ಹದಿನೆಂಟು.

**VII. ಈ ಕೆಳಗಿನ ಪದಗಳಿಗೆ ಬಹುವಚನ ರೂಪ ಬರೆಯಿರಿ:- (ಐದಕ್ಕೆ ಮಾತ್ರ)** ೦೫

1) ಪುಸ್ತಕ –
2) ಅವನು –
3) ತಾಯಿ –
4) ಅಣ್ಣ –
5) ರಕ್ಕಸ –
6) ದೇವತೆ –
7) ಮಡದಿ –

**VIII. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ:-** ೦೫

1. ಶಿಲ್ಪಕಲೆ – ಜಗಳವಿಲ್ಲ
2. ವರಕವಿ – ಜೋಗಜಲಪಾತ
3. ವಿಕಟಕವಿ – ಬೇಲೂರು
4. ಶರಾವತಿ – ದರಾಬೇಂದ್ರೆ
5. ಮಾತುಬಲ್ಲವನಿಗೆ – ತೆನಾಲಿರಾಮಕೃಷ್ಣ

**IX. ಈ ಕೆಳಗಿನವುಗಳಲ್ಲಿನ ಬಿಟ್ಟ ಸ್ಥಳಗಳನ್ನು ತುಂಬಿರಿ (ಐದಕ್ಕೆ ಮಾತ್ರ)** ೦೫

1) ಶರಾವತಿ: ____: : ಕಾವೇರಿ: ಕೆ.ಆರ್.ಎಸ್
2) ಎತ್ತು: ಏರಿಗೆಳೆಯಿತು : : ____ : ನೀರಿಗೆಳೆಯಿತು
3) ಜಕಣಚಾರಿ: ____ : : ರವಿವರ್ಮ: ಚಿತ್ರಕಾರ
4) ಶ್ರವಣಬೆಳಗೋಳ : ಗೊಮಟೇಶ್ವರ : : ಹಂಪಿ : : ____
5) ಅಮಾವಾಸ್ಯೆ : ಕಾರ್ಗತ್ತಲು : : ಹುಣ್ಣಿಮೆ : ____
6) ತ್ರಿಭುಜ : ಮೂರು ಭುಜ : : ಷಟ್‌ಭುಜ ______

www.shikarat.com

www.shikarat.com

**SHIKARAT**
Online Education

## For more contact us

**Instagram**
https://www.instagram.com/shikarat_com/

**Telegram**
https://telegram.me/shikarat

**Facebook**
https://www.facebook.com/shikarat/

**Twitter**
https://twitter.com/Shikarat_com

**Pinterest**
https://in.pinterest.com/shikarat_com/

**Website**
www.shikarat.com

**Email**
Admin@shikarat.com

**SHIKARAT**
Online Education

Sharing is Caring

😍If it is helpful Please Share with your friends😍

**X. ಕೆಳಗಿನ ಪದಗಳಿಗೆ ವಿರುದ್ಧ ಲಿಂಗ ಬರೆಯಿರಿ? (ಐದಕ್ಕೆ ಮಾತ್ರ)** 05

1) ಭಕ್ತ
2) ತಾಯಿ
3) ಅಶಕ್ತ
4) ಬಡವ
5) ಸ್ತ್ರೀ
6) ವೈದ್ಯ

**XI. ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ:- (ಐದಕ್ಕೆ ಮಾತ್ರ)** 10

1. ಶರಣಪ್ಪ ಸಾಲ ತೀರಿಸಲು ಏಕೆ ತಡವಾಯಿತು?
2. ನಾಲ್ಕನೆಯ ವ್ಯಕ್ತಿಯನ್ನು ಯಾವ ಕಾರಣಕ್ಕಾಗಿ ರಾಜನು ಅರಮನೆಯ ಮುಖ್ಯ ಕಾವಲುಗಾರನ್ನಾಗಿ ನೇಮಕ ಮಾಡಿದನು?
3. ರವಿವರ್ಮನ ಚಿತ್ರ ವಿದೇಶದಲ್ಲಿ ಬಹುಮಾನ ಗಳಿಸಿದ ವರ್ಷ ಹಾಗೂ ದೇಶ ಯಾವುದು?
4. ಮೂರು ವಿಗ್ರಹಗಳ ಕಿವಿಯಲ್ಲಿ ದಾರ ಹಾಕಿದಾಗ ಏನಾಯಿತು?
5. ಬೇಟೆ ಸಿಗದಿದ್ದಾಗ ಬೇಟೆಗಾರನು ಏನು ಮಾಡಿದನು?
6. ಜಾನ್‌ನನ್ನು ಊರಿನ ಜನ ಏಕೆ ಕೊಂಡಾಡಿದರು?
7. ಶಿವಾಜಿಯ ಒಳ್ಳೆಯ ಗುಣಗಳು ಯಾವುವು?

**XII. ಈ ಕೆಳಗಿನ ಪಾಠವನ್ನು ಓದಿ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಿ**

## ಲಾಲ್‌ಬಾಗ್ ಉದ್ಯಾನವನ

ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಅತ್ಯಂತ ಸುಂದರವಾದದ್ದು, ಅದರ ಹೆಸರನ್ನು ಕೇಳಿದೊಡನೆ ಎಲ್ಲರೂ ಪುಳಕಿತರಾಗುತ್ತಾರೆ. ನಾನಾ ಬಗೆಯ ಗಿಡ ಬಳ್ಳಿಗಳು ಹೂಗಳನ್ನು ಒಳಗೊಂಡಿರುವ ಉದ್ಯಾನ, ಈ ಕೆಂಪು ತೋಟ ಕವಿಗಳಿಗೆ, ರಸಿಕರಿಗೆ, ಜ್ಞಾನಿಗಳಿಗೆ ಹಾಗೂ ವಿಜ್ಞಾನಿಗಳಿಗೆ ಅತ್ಯಂತ ಅಚ್ಚು ಮೆಚ್ಚು.

ಇದರ ಕಲ್ಪನೆ ಮೊದಲು ಯಾರು ಮಾಡಿದರು? ಯಾರು ಬೆಳೆಸಿದರು ? ಯಾರು ವಿಸ್ತರಿಸಿದರು ? ಎಂಬ ಪ್ರಶ್ನೆಗಳಿಗೆ ಉತ್ತರಗಳು ಈ ಪಾಠದಲ್ಲಿ ದೊರೆಯುತ್ತದೆ. ಈ ಕೆಂಪು ತೋಟದ ವಿಚಾರವನ್ನು ರೂಪಿಸಿದವರು ಕೆಂಪೇಗೌಡ ಎಂದು ಹೇಳಬಹುದು. ಬೆಂಗಳೂರಿನಂತಹ ಉದ್ಯಾನ ನಗರಕ್ಕೆ ಭದ್ರ ಬುನಾದಿಯನ್ನು ನಿರ್ಮಿಸಿದವನು ಅವನೇ ಎಂದು ಧಾರಾಳವಾಗಿ ಹೇಳಬಹುದು.

ಲಂಡನ್ನಿನಲ್ಲಿಯ ಗಾಜಿನ ಅರಮನೆ 1936 ರಲ್ಲಿ ಅಗ್ನಿಗೆ ಆಹುತಿಯಾಯಿತು. ನಂತರದಲ್ಲಿ ಲಾಲ್‌ಬಾಗಿನ ಗಾಜಿನ ಮನೆ ಜನ್ಮ ತಾಳಿತು. ಈ ಗಾಜಿನ ಮನೆ ಕೆಂಪು ತೋಟದ ರತ್ನ ಕಿರೀಟ. ದೇಶ ವಿದೇಶಗಳಿಂದ ಬಂದವರು ಈ ಕೆಂಪು ತೋಟವನ್ನು ನೋಡದೆ ಹೋಗಲಾರರು. ಇಲ್ಲಿ ಅನೇಕ ರಾಷ್ಟ್ರೀಯ ಪ್ರದರ್ಶನಗಳು ನಡೆಯುತ್ತವೆ. ಅನೇಕ ಸಮ್ಮೇಳನಗಳಿಗೆ ಆಶ್ರಯವಾಗಿದೆ. ಈಗ ರಾಜಕೀಯ ಸಭೆ ಸಮಾರಂಭಗಳ ಕೇಂದ್ರ ಬಿಂದುವಾಗಿದೆ.

ಇಲ್ಲಿ ಕೆಂಪೇಗೌಡ ಗೋಪುರ ಅಂತ್ಯಂತ ಪ್ರಾಚೀನವಾದದ್ದು, ಬೆಂಗಳೂರಿನ ನಿರ್ಮಾಪಕ ಕೆಂಪೇಗೌಡ. ಇವನು 16 ನೇ ಶತಮಾನದಲ್ಲಿ 4 ಗೋಪುರಗಳನ್ನು ಸ್ಥಾಪಿಸಿದನು. ಅವನ ದೂರದೃಷ್ಟಿಯ ಫಲವಾಗಿ ಇಂದು ಬೆಂಗಳೂರು ನಗರಗಳ ರಾಣಿ ಎಂದು ಹೆಸರಾಗಿದೆ.

1) ಲಾಲ್‌ಬಾಗ್ ಎಂದರೆ ಏನು ? ಅದು ಎಲ್ಲಿದೆ ? 02

2) ಕೆಂಪುತೋಟದ ವಿಚಾರವನ್ನು ಯಾರು ರೂಪಿಸಿದರು ? 02

3) ಕೆಂಪು ತೋಟದ ಗಾಜಿನ ಮನೆ ಯಾವಾಗ ಜನ್ಮತಾಳಿತು? ಕೆಂಪು ತೋಟದದಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳು ಯಾವುವು ? 02

4) ಗಾಜಿನ ಮನೆಯನ್ನು ಲಾಲ್‌ಬಾಗ್‌ನ ಏನೆಂದು ಹೇಳುವರು ? 02

5) ಲಾಲ್‌ಬಾಗ್‌ನಲ್ಲಿರುವ ಗೋಪುರ ಯಾವುದು ? ಬೆಂಗಳೂರನ್ನು ಏನೆಂದು ಕರೆಯಲಾಗಿದೆ ? 02

* * * * * * *

www.shikarat.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ಸೆಪ್ಟೆಂಬರ್- 2018

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ-2

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

**ದಿನಾಂಕ: 26.09.2018** **ಗರಿಷ್ಟ ಅಂಕಗಳು-೫೦** **ಸಮಯ :ಮದ್ಯಾಹ್ನ : 12.00 ರಿಂದ 1.00 ರವರೆಗೆ**

---

**1. ಆಂಗ್ಲ ಭಾಷೆಗೆ ಅನುವಾದಿಸಿ:** 10 ಅಂಕಗಳು

**ಅಂಬೇಡ್ಕರ್**

ಡಾ|| ಬಿ.ಆರ್.ಅಂಬೇಡ್ಕರ್ ರವರು ೧೪.೦೪.೧೮೯೧ ರಂದು ಮಧ್ಯಪ್ರದೇಶದ ಮೊಹೋದಲ್ಲಿ ಜನಿಸಿದರು. ತಾಯಿ ಭೀಮಾಬಾಯಿ ಹಾಗೂ ತಂದೆ ರಾಮ್ಜಿ ಮಲೋಜಿ ಸಕ್ಪಾಲ್. ಇವರನ್ನು ಭಾರತಿಯ ಸಂವಿಧಾನ ಶಿಲ್ಪಿ ಎಂದು ಕರೆಯಲಾಗುತ್ತದೆ. ಅಂಬೇಡ್ಕರ್ ರವರು ಕೊಲಂಬಿಯಾ ವಿಶ್ವವಿಧ್ಯಾಲಯ ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದರು ಮತ್ತು ಅವರು ಕಾನೂನು ಅರ್ಥಶಾಸ್ತ್ರ ಹಾಗೂ ರಾಜಕೀಯ ವಿಜ್ಞಾನದ ಸಂಶೋಧಕರಾಗಿ ಖ್ಯಾತಿಯನ್ನು ಪಡೆದಿದ್ದರು. ಮಹಿಳಾ ಮತ್ತು ಕಾರ್ಮಿಕರ ಹಕ್ಕುಗಳು ಹಾಗೂ ಭಾರತದ ಸಂವಿಧಾನದ ಪ್ರಧಾನ ವಾಸ್ತುಶಿಲ್ಪಿ ಮತ್ತು ಭಾರತ ಗಣರಾಜ್ಯದ ಸ್ಥಾಪಕರಾಗಿದ್ದರು. ಸ್ವತಂತ್ರ ಭಾರತದ ಮೊದಲ ಕಾನೂನು ಸಚಿವರಾಗಿದ್ದರು,೧೯೯೦ರಲ್ಲಿ ಭಾರತದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಭಾರತ ರತ್ನವು ಮರಣೋತ್ತರವಾಗಿ ಅಂಬೇಡ್ಕರ್‌ರವರಿಗೆ ನೀಡಿ ಗೌರವಿಸಲ್ಪಟ್ಟಿತ್ತು.

**2. ಈ ಕೆಳಗಿನ ಪದಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ:** 10 ಅಂಕಗಳು

ಅ. ಅರೆಕಾಲಿಕ ಸೇವೆ

ಆ. ಸೂಚನಾ ಫಲಕ, ಮಾಹಿತಿ ಫಲಕ

ಇ. ತಜ್ಞರ ಸಮಿತಿ

ಈ. ನಿರ್ವಹಣೆ ಮತ್ತು ದುರಸ್ಥಿ

ಉ. ಭೂ–ದಾಖಲೆಗಳು

ಊ. ಸಂಚಿತ ಸವಕಳಿ

ಋ. ಅರ್ಧ ವೇತನ ರಜೆ

ಎ. ಬಂಡವಾಳ ವೆಚ್ಚ

ಏ. ಮೃತನೌಕರ

ಐ. ಇಲಾಖಾ ನಡಾವಳಿ

www.shikarat.com

**3. ಈ ಕೆಳಗಿನ ವ್ಯಾಕ್ಯಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸುವುದು:** 5 ಅಂಕಗಳು

| | |
|---|---|
| ಅ | ಧ್ಯಾನ್‌ಚಂದ್‌ರವರು ಪ್ರಸಿದ್ದ ಹಾಕಿ ಆಟಗಾರರಾಗಿದ್ದರು. |
| ಆ | ಕಾರ್ಯರಂಬ ಪ್ರಮಾಣ ಪತ್ರ |
| ಇ | ಮೇಲ್ಮನವಿ ಪ್ರಾಧಿಕಾರ |
| ಈ | ನಿರಾಕ್ಷೇಪಣಾ ಪತ್ರ |
| ಉ | ಆಂತರಿಕ ಲೆಕ್ಕಪರಿಶೋಧನಾ ಆಕ್ಷೇಪಣೆ |

**4. ಕನ್ನಡ ಭಾಷೆಗೆ ಭಾಷಾಂತರಿಸಿ:** 10 ಅಂಕಗಳು

Computer is an electronic device that facilitates processing and storage of data. The features of the computer is to process the data by performing mathematical calculations and logical activities and saving the information for later use is the specialty of the computer. A computer is a smart tool used for various purposes of collecting and sharing data. Connecting with people, calculating calculations is easy and the use of computers is very useful for many years from year to year and its functions have become smooth.

**5. ಈ ಕೆಳಗಿನ ಪದಗಳನ್ನು ಕನ್ನಡ ಭಾಷೆಗೆ ಅನುವಾಧಿಸಿ.** 10 ಅಂಕಗಳು

1. Multistoried Building
2. General order
3. Meter constant
4. Grievance
5. Building plan
6. Demand charge
7. Finance bill
8. Inspection book
9. Economic Planning
10. Joining time

**6. ಈ ವಾಕ್ಯಗಳನ್ನು ಕನ್ನಡಕ್ಕೆ ಅನುವಾದಿಸಿ** 5 ಅಂಕಗಳು

1. GST on Contractors bill.
2. Statutory auditor's observation.
3. Journey on transfer.
4. Large and Medium scale industries
5. Minutes of the meeting.

* * * * *



www.shikarat.com